ಅಸಲು ದಾವಾ ನಂ.74/2022
ಪಿ.ಡಬ್ಲ್ಯೂ-1.

**ಸಾಕ್ಷಿಯನ್ನು ಇಂದು ದಿನಾಂಕಃ 03.09.2024 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಬಿ. ಎ.ಡಿ ವಕೀಲರಿಂದ.</u>**

ನಾನು ಇವತ್ತಿನವರೆಗೂ ನಿಂಗದಳ್ಳಿ ಗ್ರಾಮದ ಮನೆಯ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿ ಅದು ಮನೆಯ ಸಂಖ್ಯೆ 3/40 ರ ದಾಖಲೆಯಾಗಿದ್ದು ಅದು ಅವರ ಮನೆ ದಾಖಲೆ ಎಂದು ಗುರುತಿಸಿದ ಕಾರಣ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ನನ್ನ ತಂದೆಯ ಆಸ್ಪತ್ರೆಗೆ ರೂ.4 ಲಕ್ಷ ಖರ್ಚು ಮಾಡಿರುತ್ತೇನೆ. ಸದರಿ ಖರ್ಚನ್ನು ನನ್ನ ತಂದೆ ಜೀವಂತ ಇದ್ದಾಗ ಮಾಡಿರುತ್ತೇನೆ. ಸದರಿ ದಾವೆ ನನ್ನ ತಂದೆ ತೀರಿಕೊಂಡ ನಂತರ ಮಾಡಿರುತ್ತೇನೆ ಎಂದರೆ ಸರಿ. ಈ ದಾವೆಯಲ್ಲಿ ನಾನು ನನ್ನ ತಂದೆಯ ಆಸ್ಪತ್ರೆ ಖರ್ಚು 4 ಲಕ್ಷ ರುಪಾಯಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಖರ್ಚಿನ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ ಬೇಕಾದರೆ ಹಾಜರು ಮಾಡುತ್ತೇನೆ ಎಂದು ನುಡಿಯುತ್ತಾರೆ.

2. ಸದರಿ ದಾವೆಯಲ್ಲಿ 2 ನೇ ಪ್ರತಿವಾದಿ ನನ್ನ ಪೋಷಕರ ವಿರುದ್ಧ ಪೋಟಗಿ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ರೂ,2000/- ಕೊಡಬೇಕು ಎಂದು ಆದೇಶ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಹಣವನ್ನು ವಸೂಲಿ ಮಾಡಲು ತಹಸಿಲ್ದಾರರವರನ್ನು ನೇಮಕ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಹಸಿಲ್ದಾರರು ನೀಡಿದ ವರದಿ ಬಗ್ಗೆ ಮಾಹಿತಿ ಇರುತ್ತದೆ. ಸದರಿ ಆಸ್ತಿ ಮಾರಾಟ ಮಾಡಬಾರದು ಎಂದು ನ್ಯಾಯಾಲಯದ ಆದೇಶ ಪಡೆದಿರುತ್ತೇನೆ ಎಂದರೆ ಸರಿ. ಸದರಿ ದಾವಾ ಆಸ್ತಿಯು ಸಾಗುವಳಿಯಲ್ಲಿ ಇದೆ ಸಾಕ್ಷಿಯು ಮುಂದುವರೆದು ಈ ವರ್ಷ ನಮಗೆ ಸಾಗುವಳಿ ಮಾಡಲು ಆಗದ ಕಾರಣ ಖಾಲಿ ಇರುತ್ತದೆ. 2 ನೇ ಪ್ರತಿವಾದಿಯು ಸಾಗುವಳಿ ಮಾಡಲು ಯಾಕೆ ತಕರಾರು ಮಾಡುತ್ತೀರಿ ಎಂದರೆ ಸಾಕ್ಷಿಯು ನಾನು ತಕರಾರು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಸಾಗುವಳಿ ಮಾಡಿ ಬಂದ ಉತ್ಪನ್ನದಲ್ಲಿ ನಮ್ಮ ಪಾಲು ನಮಗೆ ಕೊಟ್ಟರೆ ನಮಗೆ ತಕರಾರು ಇರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಗೆ ಮನೆ ಮತ್ತು ಜಮೀನಿನಲ್ಲಿ ಪಾಲು ಕೊಡುತ್ತೀರಾ ಅಥವಾ ಇಲ್ಲವೋ ಎಂದರೆ ಸಾಕ್ಷಿಯು ನಮ್ಮ ತಂದೆಯ ಪಾಲಿನ ಆಸ್ತಿಯಲ್ಲಿಪಾಲು ಕೊಡುತ್ತೇವೆ ಎಂದು ನುಡಿಯುತ್ತಾರೆ. ನನ್ನ ಹೆಸರಿನಲ್ಲಿರುವ ಮನೆ ಕಿಮ್ಮತ್ತು ಸದ್ಯ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಾಗುವುದಿಲ್ಲ. ಇನ್ನೊಂದು ಮನೆಯು ನನ್ನ ತಂದೆ ಮತ್ತು ನನ್ನ ದೊಡಪ್ಪನ ಹೆಸರಿನಲ್ಲಿ ಇರುತ್ತದೆ.

3. ನನ್ನ ತಾಯಿ ಆರೋಗ್ಯವಾಗಿದ್ದು ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಬಹುದು ಎಂದರೆ ಸರಿ. ಮನೆ ಸಂಖ್ಯೆ 3/40 ನನ್ನ ತಾಯಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನನ್ನ ತಾಯಿ ದಿ.30.07.2021 ರಲ್ಲಿ ಒಂದು ಪ್ರಮಾಣ ಪತ್ರ ಮಾಡಿ ಸಾಕ್ಷಿದಾರರ ಸಮಕ್ಷಮ ಸದರಿ ಮನೆಯನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಲು ಯಾವುದೇ ತಕರಾರು

ಇರುವುದಿಲ್ಲ ಎಂದು ಪ್ರಮಾಣ ಪತ್ರ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪ್ರಮಾಣ ಪತ್ರದ ಮುಖಾಂತರ ನನ್ನ ಹೆಸರು ದಾಖಲೆಗಳಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದುಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.